ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಮೇ 22, 2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ತಿಂಗಳ ಚಿತ್ರ ಕರ್ನಾಟಕ ಲಲಿತಕಲಾ ಅಕಾಡೆಮಿ<br>ಕು. ಮಂದಾನಿಕಿ ಸಂಗಪ್ಪ ಲೋಗವಿ,<br>ಕು. ಸವಿತಾ ಕೆ. ಪೊದ್ದಾರ್,<br>ಶ್ರೀ ಪ್ರದೀಪ್‌ಸಿಂಗ್ ಬ್ಯಸ್,<br>ಶ್ರೀ ನರಸಿಂಹಲು ಬ್ಯಾಗೆರ್ ಕಲಾಕೃತ ಪ್ರದರ್ಶನ | 23–5–2015<br>ಶನಿವಾರ<br>ಬೆಳಗ್ಗೆ<br>11–00 ಗಂಟೆಗೆ | ವರ್ಣ ಕಲಾ ಗ್ಯಾಲರಿ<br>ಕನ್ನಡ ಭವನ<br>ಎರಡನೇ ಮಹಡಿ<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಜೂನ್ 1 ರ ನಂತರ ಸಿ.ಇ.ಟಿ. ಪರೀಕ್ಷೆ ಫಲಿತಾಂಶ

ಬೆಂಗಳೂರು, ಮೇ 22 (ಕರ್ನಾಟಕ ವಾರ್ತೆ)

ಸಿ.ಇ.ಟಿ. ಪರೀಕ್ಷೆ ಫಲಿತಾಂಶವನ್ನು ಜೂನ್ 1 ರ ನಂತರ ಪ್ರಕಟಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಖಾತೆ ಸಚಿವರ ಶ್ರೀ ಕಿಮ್ಮನೆ ರತ್ನಾಕರ್ ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ವಿಧಾನ ಸೌಧದ ಸಮಿತಿ ಕೊಠಡಿಯಲ್ಲಿ ಇಂದು ಬೆಳಿಗ್ಗೆ ಅಧಿಕಾರಿಗಳ ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು ಈ ಸಂಬಂಧ ಉನ್ನತ ಶಿಕ್ಷಣ ಸಚಿವರು ಹಾಗೂ ಕಾಮೆಡ್‌ಕೆ ಜೊತೆ ಮಾತನಾಡಿದ್ದು ಅವರು ಸಹಮತ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಮರುಮೌಲ್ಯ ಮಾಪನಕ್ಕೆ 4–5 ಕೇಂದ್ರಗಳನ್ನು ಆರಂಭಿಸಲಾಗುವುದು. 3 ಜನ ಮೌಲ್ಯಮಾಪಕರಿಂದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಲಾಗುವುದು. ಹಣ ಪಾವತಿಗೆ ಸಂಬಂಧಿದಂತೆ ನಿಯಮಾವಳಿ ರೀತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ಮರು ಮೌಲ್ಯಮಾಪನಕ್ಕೆ 2825 ಅರ್ಜಿಗಳು ಬಂದಿದ್ದು ಉತ್ತರ

**ಪತ್ರಿಕೆಯ ಜೆರಾಕ್ಸ್ ಪ್ರತಿಗಾಗಿ 20,623 ಅರ್ಜಿಗಳು ಬಂದಿವೆ. ಅರ್ಜಿ ಸಲ್ಲಿಸಲು ಮೇ 25 ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದರು. ಪಿಯುಸಿ ಪರೀಕ್ಷೆ ಬಗ್ಗೆ ಗೊಂದಲವಿದ್ದಲ್ಲಿ ಬಗೆಹರಿಸುವ ಸಂಬಂಧ ಸಹಾಯವಾಣಿ ತೆರೆಯಲಾಗಿದೆ. ಈ ನಿಟ್ಟಿನಲ್ಲಿ ದೂರವಾಣಿ ಸಂಖ್ಯೆ –080– 23083900 ಗೆ ಕರೆ ಮಾಡಿ ಸಮಸ್ಯೆ ಬಗೆ ಹರಿಸಿಕೊಳ್ಳಬಹುದೆಂದು ತಿಳಿಸಿದರು. ಪಿ.ಯು. ಫಲಿತಾಂಶದಲ್ಲಿ ಯಾವೊಬ್ಬರಾಗಲಿ ವಿದ್ಯಾರ್ಥಿಗೂ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು. ಈ ಬಗ್ಗೆ ವಿದ್ಯಾರ್ಥಿಗಳಾಗಲಿ ಪೋಷಕರು ಗಾಬರಿಪಡುವ ಅಗತ್ಯವಿಲ್ಲ. ಗೊಂದಲಯುತ ಫಲಿತಾಂಶಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ತನಿಖೆ ಮಾಡಿ ಕ್ರಮ ಕೈಗೊಳ್ಳಲು ಸರ್ಕಾರದ ಹಿರಿಯ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಸಚಿವರು ತಿಳಿಸಿದರು.**
**ಪಲ್ಲವಿ/ಬಾಬು/ಕೆಪಿಪಿ/ಕೆಎಂ**

# ದೇಶದ ಅಭಿವೃದ್ಧಿಯಲ್ಲಿ ವಿಜ್ಞಾನದ ಪಾತ್ರ ಅತಿ ಮುಖ್ಯ

ಬೆಂಗಳೂರು: ಮೇ.22(ಕರ್ನಾಟಕ ವಾರ್ತೆ)

ದೇಶದ ಅಭಿವೃದ್ದಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ ಬಹು ಮುಖ್ಯ. ಹಸಿವು , ಬಡತನ ಹೋಗಲಾಡಿಸಿ ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ಸಾಮರ್ಥ್ಯ ಮತ್ತು ಶಕ್ತಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕಿದೆ ಎಂದು ಭಾರತದ ಉಪರಾಷ್ಟ್ರಪತಿ ಎಂ. ಹಮೀದ್ ಅನ್ಸಾರಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಅವರಿಂದು ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಭಾರತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಆಖಿಲ ಭಾರತ 15ನೇ ಪೀಪಲ್ಸ್ ಸೈನ್ಸ್ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ, ಅನಕ್ಷರತೆ, ಮೂಢನಂಬಿಕೆಯಂತಹ ಕಂದಾಚಾರಗಳನ್ನು ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳುವುದರ ಮೂಲಕ ತೊಡೆದುಹಾಕಬೇಕು ಎಂದು ಕರೆ ಕೊಟ್ಟರು.

ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ನಡುವಿನ ಅಸಮಾನತೆಯನ್ನು ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಬಗೆಹರಿಸಿಕೊಳ್ಳಬಹುದು. ದೇಶಗಳ ನಡುವಿನ ವಿಕಾಸಸಾಧನೆಗೆ ವಿಜ್ಞಾನ ಕೊಡುಗೆ ನೀಡಬಲ್ಲದು ಎಂದ ಅವರು, ಇಂದು ವಿಜ್ಞಾನವು ಸಮಾಜದ ಆರ್ಥಿಕತೆ ಹಾಗೂ ಬದಲಾವಣೆಯಲ್ಲಿ ಅವುಗಳು ಒಡ್ಡುವ ಸವಾಲುಗಳನ್ನು ಎದುರಿಸಲು ಅನಿವಾರ್ಯ ಅಂಶವಾಗಿದೆ ಎಂದರು.

ಮಾನವನ ಇತಿಹಾಸದಲ್ಲಿ ಆರ್ಕಿಮಿಡೀಸ್ ಕಾಲದಿಂದಲೂ ಮತ್ತು ಅದಕ್ಕೂ ಮುಂಚಿನಿಂದಲೂ ವಿಜ್ಞಾನವು ಸಾಮಾಜಿಕ ಬದಲಾವಣೆಯ ಹರಿಕಾರನಾಗಿತ್ತು. ದೊಡ್ಡ ಸಂಶೋಧನೆಗಳು, ಹುಡುಕಾಟಗಳು ಹೊಸ ತಂತ್ರಜ್ಞಾನ, ಆವಿಷ್ಕಾರಗಳ ಮೂಲಕ ಮಾನವತೆಗೆ ಹೊಸ ಸಾಧನಗಳನ್ನು ನೀಡಿ ಹೊಸ ಬೌದ್ಧಿಕ ಲಾಭ ನೀಡಿದವು ಎಂದರು.

ವಿಜ್ಞಾನವು ಮಾನವನ ಸಮಸ್ಯೆಗಳ ಬಗ್ಗೆ ಯೋಚಿಸುತ್ತದೆ ಮತ್ತು ಅದಕ್ಕೆ ತಾರ್ಕಿಕ ಉತ್ತರ ಹಾಗೂ ಸಾಂಖ್ಯಿಕ ಶೋಧನೆಗಳನ್ನು ಕೈಗೊಳ್ಳುತ್ತದೆ ಎಂದ ಅವರು, ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕ ವಿಷಯಗಳ ಕುರಿತಾದ ಚರ್ಚೆಗಳೇ ಜನ ಸಾಮಾನ್ಯರಿಂದ ದೂರವಾಗುತ್ತಿವೆ. ಈ ಅಪಾಯಕಾರಿ ಪ್ರವೃತ್ತಿ ಕೊನೆಗೊಳ್ಳಬೇಕು ಹಾಗೂ ಜನರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆದು ತಿಳವಳಿಕೆ ಹೆಚ್ಚಾಗಬೇಕು ಎಂದು ಅವರು ಕರೆ ಕೊಟ್ಟರು.

ರಾಜ್ಯಪಾಲ ವಜೂಭಾಯಿ ರೂಡಬಾಯಿವಾಲಾ ಅವರು ಮಾತನಾಡಿ, ವಿಜ್ಞಾನ ಕ್ಷೇತ್ರ ಅತಿ ವಿಸ್ತಾರವಾದ ಕ್ಷೇತ್ರವಾಗಿದ್ದು, ಮಾನವ ಸಮಸ್ಯೆಗಳ ಪರಿಹಾರಕ್ಕಾಗಿ ಹೆಚ್ಚು ಹೆಚ್ಚು ಸಂಶೋಧನೆಗಳು

ಆಗಬೇಕು. ಮಾನವ ಜೀವನದ ಉಪಯೋಗಕ್ಕೆ ಬಾರದ ವಿಜ್ಞಾನ ಕೇವಲ ಪ್ರಬಂಧವಾಗಿ ಉಳಿಯುತ್ತದೆಯೇ ಹೊರತು ವಾಸ್ತವದಲ್ಲಿ ಯಾವುದೇ ಉಪಯೋಗಕ್ಕೆ ಬಾರದು ಎಂದರು.

ಭಾರತ ರಾಷ್ಟ್ರದ ವಿಕಾಸಕ್ಕಾಗಿ ಎಲ್ಲರೂ ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳಬೇಕಿದೆ ಎಂದ ಅವರು, ಭಾರತದಲ್ಲಿ ವಿಜ್ಞಾನ ಕ್ಷೇತ್ರ ಬಹಳವಾಗಿ ಮುಂದುವರೆದಿದ್ದು, ಅತಿ ಹೆಚ್ಚು ಯುವ ಜನರು ವೈಜ್ಞಾನಿಕ ಮನೋಭಾವನೆ ಹೊಂದಿದ್ದಾರೆ ಎಂದರು.

ಮಂಗಳ ಗ್ರಹಕ್ಕೆ ಉಪಗ್ರಹ ಹಾರಿಬಿಟ್ಟ ಹಿರಿಮೆ ಮೊದಲಿಗೆ ನಮ್ಮ ಇಸ್ರೋ ಸಂಸ್ಥೆಗೆ ಸಲ್ಲುತ್ತದೆ ಎಂದ ಅವರು, ವಿಜ್ಞಾನ ಕ್ಷೇತ್ರ ಲಾಭಕ್ಕಾಗಿ ಇಲ್ಲ. ಇದು ಮಾನವನ ಒಳಿತಿನ ಬಗ್ಗೆ ಚಿಂತಿಸುತ್ತದೆ ಎಂದರು.

ಯಾವ ವ್ಯಕ್ತಿ ಸರಳವಾಗಿ ಜೀವಿಸುತ್ತಾನೆಯೋ ಅವನು ಉನ್ನತವಾಗಿ ಚಿಂತಿಸುತ್ತಾನೆ ಎಂದ ರಾಜ್ಯಪಾಲರು ಕ್ರಿಯಾತ್ಮಕ ಯೋಚನೆಗೆ ಸರಳ ಯೋಚನೆ ಪೂರಕವಾಗಿರುತ್ತದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರಾದ ಎಸ್ ಆರ್ ಪಾಟೀಲ್ ಅವರು ಮಾತನಾಡಿ, ಈ ವಿಜ್ಞಾನ ಸಮಾವೇಶ ಹೊಸ ಚಿಂತನೆಗಳಿಗೆ ದಾರಿ ಮಾಡಕೊಡಲಿದೆ ಎಂದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನ ಇಂದು ಎಲ್ಲಾ ಕ್ಷೇತ್ರದಲ್ಲೂ ಅತಿ ಮಖ್ಯ ಪಾತ್ರ ವಹಿಸುತ್ತದೆ ಎಂದರು.

ವಿಜ್ಞಾನ ತಂತ್ರಜ್ಞಾನವನ್ನು ಎಲ್ಲಾ ಆಯಾಮದಲ್ಲೂ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ಹಲವು ಕ್ರಮ ಕೈಗೊಂಡಿದೆ ಎಂದ ಅವರು, ಇಲಾಖೆ ಸಹ ತನ್ನ ಅಂಗ ಸಂಸ್ಥೆಗಳಾದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಜವಾಹರ್‌ಲಾಲ್‌ನೆಹರು ತಾರಾಲಯ ಮೂಲಕ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು.

ಪ್ರೊ. ಸಿ.ಎನ್. ಆರ್. ರಾವ್ ಅವರು ಮಾತನಾಡಿ ಬಡತನ ನಿರ್ಮೂಲನೆ, ಸಕಲರಿಗೂ ಆರೋಗ್ಯ, ಸಕಲರಿಗೂ ವೈಜ್ಞಾನಿಕ ಮಾಹಿತಿ ಈ ಮೂರು ಅಂಶಗಳ ಮೇಲೆ ಒತ್ತು ನೀಡುವ ಮೂಲಕ ನಮ್ಮ ಸಮಾಜವನ್ನು ಪರಿವರ್ತಿಸಬೇಕಿದೆ ಎಂದರು. ನಮ್ಮ ದೇಶದ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ಒದಗಿಸುವತ್ತ ನಾವೆಲ್ಲರೂ ಚಿಂತಿಸಬೇಕಿದೆ ಮತ್ತು ಮಕ್ಕಳಲ್ಲಿ ಬಾಲ್ಯದಲ್ಲೇ ವೈಜ್ಞಾನಿಕ ಮನೋಭಾವನೆಯನ್ನು ಬೆಳಸುವುದು ಪೋಷಕರ, ಶಿಕ್ಷಕರ, ವಿಜ್ಞಾನಿಗಳ ಮಾಧ್ಯದವರ ಜವಾಬ್ದಾರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರೊ. ಯು.ಆರ್ .ರಾವ್, ಪ್ರೊ.ಸಿ.ಎನ್.ಅರ್ ರಾವ್, ಅಖಿಲ ಭಾರತ ವಿಜ್ಞಾನ ಕಾಂಗ್ರೆಸ್‌ನ ಅಧ್ಯಕ್ಷ ಡಿ.ರಘುನಂದನ್ ಅವರುಗಳು ಉಪಸ್ಥಿತರಿದ್ದರು.
ಪಲ್ಲವಿ/ಮಮತ

## Inviting application for 3 Year Diploma course in Handloom and Textile Technology for 2015-16

Bangalore, May 22 (Karnataka Informaiton)

Application are invited for 3 year Diploma Course in Handloom and Textile Technology for the academic year 2015-16 from the eligible candidates. The eligibility for submission of application is pass in SSLC or equivalent examination with English as subject of study. Aggregate of marks obtained in the qualifying examination shall be the basis for determination of merit.

As per the guidelines the students will be paid a monthly stipend upto Rs. 1200/- during the coures of study, Hostel facilites are alse made available on payment.

Age limit for admission is between 15 to 23 years for general candidates and 15 to 25 years for SC/ST candidates as on 01-07-2015. A total of 42 candidates will be selected to study the above course in the following institutions.

| | | |
|---|---|---|
| 1) | Karnataka Handloom Technology Institute, Narasapura Gadag (karnataka) | - 22 Candidates |
| 2) | Indian Institute of Handloom Technology, Salem (TamilNadu) | - 15 Candidates |
| 3) | S.P.K.M Indian Institute of Handloom Technology, Venkatagiri (Andhra Pradesh) | - 03 Candidates |
| 4) | Indian Institute of Handloom Technology, Kannur (Kerala) | - 02 Candidates |
| | **Total** | **-42 Candidtaes.** |

Merited candidates shall be called for admission through counselling.

Interested candidates may collect the application forms free of cost from this office (**Ph:080-22244828/ 22485690 / 22278223**) or from the Principal, Karnataka Handloom Technology Institute, Narasapur, Gadag-582102 **(Ph:08372-218696)** or the Joint Director /Deputy Director / Assistant Director, Handloom and Textiles in the respective Districts.

Completely filled applications are required to be sent to **"The Principal, Karnataka Handloom Technology Institute, Narasapur, Gadag-582102"** The last date for receipt of applications is 10-06-2015 says press release issued by Commissioner for Textile Development and Director of Handlooms and Textiles.
pallavi/km

## ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ 03 ವರ್ಷಗಳ ಡಿಪ್ಲೋಮಾ ಕೋರ್ಸ್‌ಗೆ 2015-16ನೇ ಸಾಲಿಗೆ ಅರ್ಜಿಗಳ ಆಹ್ವಾನ

ಬೆಂಗಳೂರು, ಮೇ 22 (ಕರ್ನಾಟಕ ವಾರ್ತೆ)

2015-16 ನೇ ಸಾಲಿನ ಶೈಕ್ಷಣಿಕ ಅವಧಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ ಕೋರ್ಸ್ ಕಲಿಕೆಗಾಗಿ 42 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ

ವಿದ್ಯಾರ್ಥಿಗೆ ಪ್ರತಿ ತಿಂಗಳು 1200/- ರವರೆಗೆ ಶಿಷ್ಯವೇತನ ನೀಡಲಾಗುವುದು ಹಾಗೂ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲಿಷ್‌ನ್ನು ಒಂದು ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದಿನಾಂಕ:01-07-2015 ಕ್ಕೆ ಅನ್ವಯಿಸುವಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು 15 ರಿಂದ 23 ರ ವಯೋಮಿತಿಯಲ್ಲಿರಬೇಕು ಹಾಗೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಅಭ್ಯರ್ಥಿಗಳು 15 ರಿಂದ 25 ರ ವಯೋಮಿತಿಯಲ್ಲಿರಬೇಕು. ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಕ್ರೂಢೀಕೃತ ಅಂಕಗಳು ಮೆರಿಟ್ ಲೆಕ್ಕಾಚಾರಕ್ಕೆ ಆಧಾರವಾಗಿರುತ್ತವೆ.

**ಮೇಲ್ಕಂಡ ಡಿಪ್ಲೋಮಾ ಕೋರ್ಸ್‌ಗಾಗಿ:**

| | | |
|---|---|---|
| 1) | ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ-ಬೆಟಗೇರಿ (ಕರ್ನಾಟಕ) | -22 ಅಭ್ಯರ್ಥಿಗಳು |
| 2) | ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ, (ತಮಿಳುನಾಡು) | -15 ಅಭ್ಯರ್ಥಿಗಳು |
| 3) | ಎಸ್.ಪಿ.ಕೆ.ಎಂ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ವೆಂಕಟಗಿರಿ (ನೆಲ್ಲೂರು, ಆಂಧ್ರಪ್ರದೇಶ) | -03 ಅಭ್ಯರ್ಥಿಗಳು |
| 4) | ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಕಣ್ಣೂರು (ಕೇರಳ) | -02 ಅಭ್ಯರ್ಥಿಗಳು |
| | **ಒಟ್ಟು** | **-42 ಅಭ್ಯರ್ಥಿಗಳು** |

ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯಾ ಡಿಪ್ಲೋಮಾ ಸಂಸ್ಥೆಗಳಲ್ಲಿ ಕೋರ್ಸ್ ಪ್ರವೇಶ ಕುರಿತಂತೆ ಕೌನ್ಸಿಲಿಂಗ್‌ಗಾಗಿ ಕರೆಯಲಾಗುವುದು. ಆಸಕ್ತಿ ಇರುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಜಿ ಫಾರಂಗಳಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: **080-22244828/ 22485690/ 22271628** ಅಥವಾ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ-ಬೆಟಗೇರಿ (ದೂರವಾಣಿ ಸಂಖ್ಯೆ: **08372-218696)** ಅಥವಾ ಆಯಾ ಜಿಲ್ಲೆಯ ಜಂಟಿ/ ಉಪ/ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್ ಇವರುಗಳನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪುರ, ಗದಗ - 582102 ಇವರಿಗೆ ಸಲ್ಲಿಸಲು ಕೊನೆಯ ದಿನಾಂಕ:10-06-2015 ಸಲ್ಲಿಸಲು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಪಲ್ಲವಿ/ಕೆಎಂ

ಬಾಬು/ಕೆಎಂ